2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳವರ ನ್ಯಾಯಾಲಯ,
ಬೆಂಗಳೂರು ನಗರ.
ಸಿ.ಸಿ.ನಂ. 461/2015

ದಿನಾಂಕ 27ನೇ ಜನವರಿ 2021

ಫಿರ್ಯಾದಿದಾರರು : ರಾಜ್ಯ ಸರ್ಕಾರದ ಪರವಾಗಿ ಸಿದ್ದಪುರ ಪೊಲೀಸರು

-ವಿರುದ್ಧ –

ಆರೋಪಿತರು : ಸಲೀಂ

**ದೋಷಾರೋಪಣೆ**

ಶ್ರೀಮತಿ. ರೇಷ್ಮ ಜೇನ್ ರೊಡ್ರಿಗಸ್ , ಎಂ.ಕಾಂ, ಎಲ್.ಎಲ್.ಎಂ 2ನೇ ಯ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ ಆದ ನಾನು, ಕೆಳಕಂಡ ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತೇನೆ.

ದಿಃ 20-12-2012 ರಂದು ಸಿದ್ದಪುರ ಪೋಲೀಸ್ ಠಾಣಾ ಸರಹದ್ದಿನ ಜಯನಗರ 1 ನೇ ಬ್ಲಾಕ್ ಸೋಮೇಶ್ವರನಗರ 9 ನೇ ಮೈನ್ ನಲ್ಲಿರುವ ಸ್ವತ್ತು ಸಂಃ 49 ರಿಂದ 54 ರ ಸ್ವತ್ತುಗಳನ್ನು ಸಾಕ್ಷಿ 28 ರಿಂದ 32 ರವರು ಎ-1 ಆರೋಪಿಗೆ ಮಾರಾಟ ಮಾಡಿರುತ್ತಾರೆ. ಎ-1 ಆರೋಪಿಯು ನಕಲಿ ನಕ್ಷೆ ತಯಾರಿಸಿ, ನಕ್ಷೆಯ ಆಧಾರದ ಮೇಲೆ ಒಟ್ಟುಗೂಡಿಸಿ ಕನಾನು ಬಾಹಿರವಾಗಿ ಮತ್ತು ನಕ್ಷೆಗೆ ವ್ಯತಿರಿಕ್ತವಾಗಿ 6 ಹಂತಸ್ತಿನ ಬಹುಮಹಡಿ ಕಟ್ಟಡ ಕಾಮಗಾರಿಯನ್ನು ಕೈಗೊಂಡಿದ್ದು , ಈ ರೀತಿಯಾಗಿ 6 ಹಂತಸ್ತಿನ ಕಾಮಗಾರಿ ಕೈಗೊಳ್ಳುವುದರಿಂದ , ಕಟ್ಟಡ ಯಾವುದೇ ಹಂತದಲ್ಲೂ ಕುಸಿದು ಬೀಳುವ ಸಂಭವವಿರುದರಿಂದ ಕಾರ್ಮಿಕರ ಮರಣ ಉಂಟಾಗುವ ಸಂಭವವಿದೆ ಎಂದು ತಿಳಿದಿದ್ದರೂ ಸಹ ಕಟ್ಟಡದ ಕೂಲಿ ಕಾರ್ಮಿಕರ ಜೀವ ರಕ್ಷಣೆಗೆ ಬೇಕಾಗುವ ಯಾವುದೇ ಮುಂಜಗ್ರತಾ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷತೆ ವಹಿಸಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 336, 337, 338 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.

2 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಆದ ನೀವು ನಿಮ್ಮ ನಿರ್ಲಕ್ಷತನದಿಂದ ಬಹುಮಹಡಿ ಕಟ್ಟಡ ಕುಸಿದು ಬಿದ್ದ ಪರಿಣಾಮ 3 ಜನ ಅಮಾಯ ಕೂಲಿ ಕಾರ್ಮಿಕರು ಮೃತ ಪಟ್ಟು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.

3 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಎ-1 ಆರೋಪಿಯು ಸಾಕ್ಷಿ-28 ರಿಂದ 32 ರವರ ಹೆಸರಿನಲ್ಲಿ ವಂಚಿಸುವ ಉದ್ದೇಶಕ್ಕಾಗಿ

**ದಾಖಲೆಗಳನ್ನು ಸುಳ್ಳಾಗಿ ಸೃಷ್ಟಿಕೊಂಡು ದಾಖಲೆಗಳು ನೈಜವೆಂದು ಬಳಿಸಿ ಸತ್ಯವನ್ನು ಮರೆಮಾಚಿ ಭಾರತೀಯ ದಂಡ ಸಂಹಿತೆ ಕಲಂ 417 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**4 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಕಲಿ ದಾಖಲೆಗಳು ನೈಜವೆಂದು ಬಳಸಿ ಸತ್ಯ ಮರಮಾಚಿ ಮತ್ತೊಬ್ಬನಂತೆ ನಟಿಸಿ ಭಾರತೀಯ ದಂಡ ಸಂಹಿತೆ ಕಲಂ 419 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**5 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ದಾಖಲೆಗಳು ನೈಜವೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿ.ಬಿ.ಎಂ.ಪಿ ಉಪವಿಭಾಗಕ್ಕೆ ದಾಖಲೆಗಳನ್ನು ಸಲ್ಲಿಸಿದಕ್ಕೆ ಭಾರತೀಯ ದಂಡ ಸಂಹಿತೆ ಕಲಂ 465 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**6 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ದಾಖಲೆಗಳು ನೈಜವೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು , ಬಿ.ಬಿ.ಎಂ.ಪಿ ಉಪವಿಭಾಗಕ್ಕೆ ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸ್ಪಷ್ಟಣೆ ಭಾರತೀಯ ದಂಡ ಸಂಹಿತೆ ಕಲಂ 468 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**7 ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ದಾಖಲೆಗಳು ನೈಜವೆಂದು ಬಳಸಿ ಭಾರತೀಯ ದಂಡ ಸಂಹಿತೆ ಕಲಂ 471 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸ್ವತ್ತನ್ನು ಅಪ್ರಮಾಣಿಕವಾಗಿ ಪ್ರೇರೇಪಿಸಿ ಭಾರತೀಯ ದಂಡ ಸಂಹಿತೆ ಕಲಂ 420 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ.**

**ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.**

**ಮು ಮ ನಗರ 2ನೇ ಹೆ ದಂಡಾಧಿಕಾರಿ**

**ಪ್ರಶ್ನೆ:1: ಮೇಲ್ಕಂಡ ಆರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?**

**ಉತ್ತರ: 1.**

**ಪಶ್ನೆ:2: ನೀವು ಮೇಲ್ಕಂಡ ಆರೋಪಣೆ ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆ?**

**ಉತ್ತರ: 1.**

**(ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಗಿದೆ)**

**ಮು ಮು ನಗರ 2ನೇ ಹೆ ದಂಡಾಧಿಕಾರಿ**